# ಭಾವನೆಯೂ ಸಂಭಾವನೆಯೂ

ಚಪ್ಪಟೆ ಮೂಗಿನ ಮೇಲೆ ದಪ್ಪ ಕನ್ನಡಕ. ಕನ್ನಡದ ಮಧ್ಯಭಾಗದ ಮೇಲಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಇಟ್ಟ ಕುಂಕುಮ. ಅಗಲವಾದ ಹಣೆಯ ಮೇಲೆ ಆಗೀಗ ನೆರಿಗೆ. ಅವರಿಗೆ ಎರಡು ಹೆಸರು. ಅಪ್ಪ–ಅಮ್ಮ ಇಟ್ಟದ್ದು ಒಂದು. ಸಿನಿಮಾ ಸಹವಾಸ ಕೊಟ್ಟಿದ್ದು ಇನ್ನೊಂದು. ಹಾಡುಗಳೆಂದರೆ ಮೊದಲಿನಿಂದಲೂ ಪ್ರೀತಿ. ಅದಕ್ಕೆ ಹೊಂದುವಂಥ ಹೆಸರೇ ಉಳಿದು, ಅಪ್ಪ–ಅಮ್ಮ ಇಟ್ಟ ಹೆಸರು ಅನೇಕರಿಗೆ ಗೊತ್ತೇ ಇಲ್ಲ ಎನ್ನುವಷ್ಟು ಜನಪ್ರಿಯರಾದರು. ಹಾಡುಗಳಷ್ಟೇ ಅವರಿಗೆ ಪ್ರಿಯವಲ್ಲ, ನಿರ್ದೇಶನದ ಟೋಪಿ ಕೂಡ ತೊಟ್ಟರು. ಹಾಗಾಗಿ ಅವರನ್ನು ಸಿನಿಮಾ ಪ್ರಿಯ ಎಂದರೆ ಉತ್ಪ್ರೇಕ್ಷೆಯಾಗದು.

ಗತದ ನೆನಪುಗಳು ಅವರ ನಾಲಗೆ ತುದಿಯಲ್ಲಿ. ಪುರುಸೊತ್ತಾಗಿ ಕುಳಿತರೆ, ಒಂದಿಡೀ ದಿನ ಸಿನಿಮಾ ಕ್ಷೇತ್ರದ ತಮ್ಮ ಅನುಭವ ಕಥಾನಕಗಳನ್ನು ತುಸುವೂ ಬೇಸರವಿಲ್ಲದೆ ಹೇಳಿಕೊಳ್ಳುತ್ತಾರೆ. ಆ ನೆನಪಿನ ಬುತ್ತಿಯ ಒಂದು ಕಥಾನಕ ಕೇಳಿ...

ಕಾದಂಬರಿ ಆಧಾರಿತ ಸಿನಿಮಾ ನಿರ್ದೇಶಿಸುವ ಹೊಣೆಗಾರಿಕೆ ಇವರ ಹೆಗಲೇರಿತು. ಹಾಡುಗಳನ್ನೂ ಬರೆದರು. ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು ಎನ್ನುವ ಅರಿವು ಅವರಿಗೆ ಇತ್ತು. ಆ ಸಿನಿಮಾಗೆ ನಾಯಕನಾಗಿ ಆಯ್ಕೆಯಾದದ್ದು ಒಬ್ಬ ಸೂಪರ್ ಸ್ಟಾರ್. ಸ್ಟಾರ್‌ಗಿರಿ ಉಜ್ಜುವುದನ್ನು ಅಭ್ಯಾಸ ಮಾಡಿಕೊಂಡಿದ್ದ ಆ ನಟನಿಗೆ ಮೊದಮೊದಲು ಪಾತ್ರದ ಘನತೆ ಅರಿವಾಗಲಿಲ್ಲ. ವೈದ್ಯನ ಪಾತ್ರ ಅದಾದರೂ ಆಕ್ಷನ್ ಹೀರೊ ಸ್ಟೈಲಿನಲ್ಲಿ ನಡೆಯತೊಡಗಿದರು. ಕಾರಿನಿಂದ ಇಳಿದು, ಒಂದಿಷ್ಟು ದೂರ ನಡೆದುಕೊಂಡು ಬರುವ ಶಾಟ್‌ನ ಚಿತ್ರೀಕರಣ. ಒಂದಾದ ಮೇಲೊಂದರಂತೆ ಟೇಕ್‌ಗಳಾದವು. ನಾಯಕನ ನಡಿಗೆ ಬದಲಾಗಲೇ ಇಲ್ಲ. ಕೊನೆಗೆ ಈ ಪಾಪದ ನಿರ್ದೇಶಕರು ಹೋಗಿ, 'ನೀನು ವೈದ್ಯನಪ್ಪ... ಘನತೆಯಿಂದ ನಿಧಾನವಾಗಿ ಹೆಜ್ಜೆ ಹಾಕಬೇಕು. ಹೊಡೆದಾಡಲು ಹೋಗುವಂತೆ ನಡೆಯಬಾರದು' ಎಂದು ಕಿವಿಮಾತು ಹೇಳಿದರು. ಕೊನೆಗೂ ಶಾಟ್ ಓಕೆ ಆಯಿತು.

ಸಮಸ್ಯೆ ಇಷ್ಟಕ್ಕೇ ಮುಗಿಯಲಿಲ್ಲ. ಪದೇಪದೇ ನಾಯಕನಲ್ಲಿ ಇಮೇಜು ಪ್ರಜ್ಞೆ ಜಾಗೃತವಾಗಿ, ಈ ನಿರ್ದೇಶಕರು ಪೇಚಿಗೆ ಸಿಲುಕುತ್ತಿದ್ದರು. ಆಗೆಲ್ಲಾ ಇಮೇಜು ತೊಳೆಯಲು ಹೆಣಗಾಡುವುದು ಮಾಮೂಲಾಯಿತು.

ಸಿನಿಮಾ ತೆರೆಕಂಡಿತು. ಯಶಸ್ವಿಯೂ ಆಯಿತು. ಅದರ ಹಾಡುಗಳು ಇಂದಿಗೂ ಜೀವವೀಣೆ ಮೀಡಿಯುವಷ್ಟು ಯಶಸ್ವಿಯಾಗಿವೆ. ಆದರೆ, ಬಾಕಿ ಇದ್ದ ಮೂರು ಸಾವಿರ ಚಿಲ್ಲರೆ ರೂಪಾಯಿ ಸಂಭಾವನೆ ಮಾತ್ರ ಕಿಸೆ ಸೇರಲೇ ಇಲ್ಲ.

ಸಂಗೀತ ನಿರ್ದೇಶಕ ವಿಜಯ ಭಾಸ್ಕರ್ ಇಟ್ಟ ಹೆಸರು ಅವರಿಗೆ ಜನಪ್ರಿಯತೆಯನ್ನೇನೋ ಕೊಟ್ಟಿತು. ಆದರೆ, ಕಾಸಿಗೆ ಕೈಕೊಡುವವರ ಪರಿಪಾಠ ತಪ್ಪಲಿಲ್ಲ. ಪ್ರಣಯ ರಾಜ ಬಿರುದಾಂಕಿತ ನಟ ಇವರಿಂದ ಒಂದು ಸಿನಿಮಾ ನಿರ್ದೇಶಿಸಿದರು. ಅವರು ಕೊಟ್ಟ 15 ಸಾವಿರ ರೂಪಾಯಿಯ ಚೆಕ್ಕನ್ನು ಬ್ಯಾಂಕಿಗೆ ಪ್ರೆಸೆಂಟ್ ಮಾಡುವ ಸುವರ್ಣಾವಕಾಶಕ್ಕಾಗಿ ವರ್ಷಗಟ್ಟಲೆ ಕಾದಿದ್ದೇ ಆಯಿತು.

ತಮ್ಮ ಬದುಕಿನ ಇಂಥ ನೆನಪುಗಳನ್ನು ಹೇಳಿಕೊಂಡು ಹಲವು ಭಾವಗಳನ್ನು ಹೊಮ್ಮಿಸುವ ಅವರು ತಮಾಷೆಯ ಧಾಟಿಯಲ್ಲಿ ಮಾತನಾಡಿದರೂ, ಅದರಲ್ಲಿ ದೊಡ್ಡ ವಿಷಾದ ಬೆರೆತಿದೆ.

• ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68